ವಾಯುವ್ಯ ಕರ್ನಾಟಕ ಸಾರಿಗೆಯ ನಷ್ಟ ಹಾಗೂ ಸೇವೆ.

405 (724) ಶ್ರೀ ಜೆ.ಡಿ.ನಾಯ್ಕ (ಭಟ್ಕಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕಳೆದ ಎಷ್ಟು ವರ್ಷಗಳಿಂದ ನಷ್ಟದಲ್ಲಿ ನಡೆಯುತ್ತಿದೆ (ವರ್ಷವಾರು ನಷ್ಟದ ವಿವರ ನೀಡುವುದು);

ಆ) ಈ ಸಂಸ್ಥೆ ನಷ್ಟ ಅನುಭವಿಸಲು ಕಾರಣಗಳು ಏನು;

ಇ) ಈ ಸಂಸ್ಥೆ ವ್ಯಾಪ್ತಿಯಲ್ಲಿ ಯಾವ ಯಾವ ಜಿಲ್ಲೆ ಬರುತ್ತದೆ;

ಈ) ಒಳ್ಳೆಯ ಗುಣಮಟ್ಟದ ಸಾರಿಗೆ ವ್ಯವಸ್ಥೆ ನೀಡಲು ವಿಜಾಪುರ ಜಿಲ್ಲೆಯನ್ನು ಈಕರಸಾಸಂಸ್ಥೆಗೆ ಸೇರಿಸಿದ ಹಾಗೇ ಉತ್ತರ ಕನ್ನಡ ಜಿಲ್ಲೆಯನ್ನು ಕರಾರಸಾಸಂಸ್ಥೆಗೆ ಸೇರಿಸಿದರೆ ಒಳ್ಳೆಯದಲ್ಲವೆ;

ಉ) ಈ ಸಂಸ್ಥೆಯ ಹಣಕಾಸಿನ ನಷ್ಟಕ್ಕೆ ಯಾವ ಯಾವ ಅಧಿಕಾರಿಗಳು ಭಾಗಿದಾರರು ಹಾಗೂ ಜವಾಬ್ದಾರರು (ಅಧಿಕಾರಿಗಳ ವಿವರ ಕೊಡುವುದು)

ಊ) ಈ ಅಧಿಕಾರಿಗಳ ಮೇಲೆ ಯಾವ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಶ್ರೀ ಆರ್ ಅಶೋಕ್ (ಸಾರಿಗೆ ಸಚಿವರು) :

ಅ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಅನುಭವಿಸಿದ ವರ್ಷವಾರು ನಷ್ಟದ ವಿವರ ಕೆಳಗಿನಂತಿರುತ್ತದೆ.

	ನಷ್ಟ
1) 2003–04 : ರೂ	9.68 ಕೋಟಿ
2) 2004–05 : ರೂ	62.38 ಕೋಟಿ
3) 2005–06 : ರೂ	30.20 ಕೋಟಿ
4) 2006–07 : ರೂ	----------
4) 2007–08 : ರೂ	67.06 ಕೋಟಿ
5) 2008–09 : ರೂ	68.56 ಕೋಟಿ

ಆ)

1. 01–04–2003ರಿಂದ ಕಾಂಟ್ರ್ಯಾಕ್ಟ್ ಕ್ಯಾರೇಜ್ ಕಾಯ್ದೆಯನ್ನು ಮರು ಪ್ರಾರಂಭಿಸಿದರಿಂದಾಗಿ ಖಾಸಗಿ ವಾಹನಗಳ ಮಾಲೀಕರು ಈ ಕಾಯ್ದೆಯಡಿಯಲ್ಲಿ ಪರವಾನಿಗೆಯನ್ನು ಪಡೆದು ಸಂಪೂರ್ಣ ರಾಷ್ಟ್ರೀಕೃತ ಮಾರ್ಗಗಳ ಮೇಲೆ 288 ವಾಹನಗಳು ಕಾಂಟ್ರ್ಯಾಕ್ಟ್ ಕ್ಯಾರೇಜ್‌ಯಾಗಿ ಕಾರ್ಯಾಚರಣೆ ಮಾಡದೇ ಸ್ಟೇಜ್ ಕ್ಯಾರೇಜ್‌ಯಾಗಿ ಸಂಸ್ಥೆಯ ವಾಹನಗಳ ಸಮಾನಾಂತ ರವಾಗಿ ಕಾರ್ಯಾಚರಣೆ ಮಾಡುತ್ತಿರುವುದರಿಂದಾಗಿ ಸಂಸ್ಥೆಗೆ ಸೇರಬೇಕಾದ ಪ್ರತಿ ವರ್ಷ ಸುಮಾರು ರೂ.63.00 ಕೋಟಿ ಆದಾಯವು ನಷ್ಟವಾಗುತ್ತಿದೆ.
2. ಹುಬ್ಬಳ್ಳಿ–ಧಾರವಾಡ ನಗರಗಳ ಮಧ್ಯೆ ಬೇಂದ್ರೆ ನಗರ ಸಾರಿಗೆ ಖಾಸಗಿ ಸಂಸ್ಥೆಗೆ ಪ್ರತಿ ದಿನ 40 ವಾಹನಗಳಿಂದ 320 ಟ್ರಿಪ್ಪುಗಳನ್ನು ಕಾರ್ಯಾಚರಣೆ ಮಾಡಲು ಪರವಾನಿಗೆ ನೀಡಿದ್ದು, ಇದರಿಂದಾಗಿ ಸಂಸ್ಥೆಗೆ ಸೇರಬೇಕಾದ ರೂ 5.47 ಕೋಟಿಗಳಷ್ಟು ಆದಾಯವು ನಷ್ಟವಾಗುತ್ತಿದೆ.
3. ಸಂಸ್ಥೆಯ ವ್ಯಾಪ್ತಿಯು ಸಂಪೂರ್ಣ ರಾಷ್ಟ್ರೀಕೃತವಾಗಿದ್ದು, ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೆ ಕಡ್ಡಾಯವಾಗಿ ಕನಿಷ್ಠ ಸಾರಿಗೆ ಸೌಲಭ್ಯಗಳನ್ನು ಒದಗಿಸುವುದು ಜವಾಬ್ದಾರಿಯಾಗಿರುತ್ತದೆ. ಆದುದರಿಂದ ಸಂಸ್ಥೆಯು ಗ್ರಾಮಾಂತರ ಪ್ರದೇಶಗಳಲ್ಲಿ 1689 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಿ 5.33 ಲಕ್ಷ ಕಿ.ಮೀ.ಗಳ ಕಾರ್ಯಾಚರಣೆ ಮಾಡುತ್ತಿದೆ. ಇದಲ್ಲದೇ 544 ಅನುಸೂಚಿಗಳನ್ನು ನಗರ ಮತ್ತು ಉಪ–ನಗರಗಳಲ್ಲಿ ಪ್ರತಿದಿನ 1.33 ಲಕ್ಷ ಕಿ.ಮೀ.ಗಳಷ್ಟು ಕಾರ್ಯಾಚರಣೆ ಮಾಡುತ್ತಿದೆ. ಈ ಎಲ್ಲಾ ಕಾರ್ಯಾಚರಣೆಯ ಅಸ್ಥಿರ ಮತ್ತು ಅದಕ್ಕಿಂತ ಕಡಿಮೆ ಆದಾಯವನ್ನು ಗಳಿಸಲಾಗುತ್ತಿರುವುದರಿಂದ ಪ್ರತಿ ವರ್ಷ ಸುಮಾರು ರೂ. 75.79 ಕೋಟಿಗಳ ಕೊರತೆಯನ್ನು ಅನುಭವಿಸುತ್ತಿದೆ.

4. ಸಂಸ್ಥೆಯ ವ್ಯಾಪ್ತಿಯಲ್ಲಿ 531 ಬಸ್ಸುಗಳು, 2967 ಟೆಂಪೋ/ ಟ್ರ್ಯಾಕ್ಸ್, 2759 ಮ್ಯಾಕ್ಸಿಕ್ಯಾಬ್ಸ್, 1491 ಜೀಪ್‌ಗಳು, 2947 ಟಮ್-ಟಮ್‌ಗಳು ಹೀಗೆ ಒಟ್ಟಾರೆ 10695 ಅನಧೀಕೃತ ಖಾಸಗೀ ವಾಹನಗಳ ಕಾರ್ಯಾಚರಣೆಯಿಂದಾಗಿ ಸಂಸ್ಥೆಯ ನಷ್ಟಕ್ಕೆ ಕಾರಣವಾಗಿರುತ್ತದೆ.
5. ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವಂತವ ಕೆಲವೊಂದು ರಸ್ತೆಗಳು ತುಂಬಾ ಹದಿಗೆಟ್ಟಿರುವುದರಿಂದಾಗಿ ವಾಹನಗಳ ನಿರ್ವಹಣಾ ವೆಚ್ಚ ಹೆಚ್ಚಾಗಿ ನಷ್ಟಕ್ಕೆ ಕಾರಣವಾಗುತ್ತಿದೆ.

ಇ) ವಾಕರಸಾಸಂಸ್ಥೆಯ ವ್ಯಾಪ್ತಿಯಲ್ಲಿ ಈ ಕೆಳಗಿನ ಜಿಲ್ಲೆಗಳು ಬರುತ್ತವೆ.

ಧಾರವಾಡ, ಬೆಳಗಾವಿ, ಬಾಗಲಕೋಟೆ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆ.

ಈ) ಈ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ.

ಉ) ಮತ್ತು ಊ) 2006-07ನೇ ಸಾಲಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲು ವ್ಯವಸ್ಥಾಪಕರ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇವರನ್ನು ಕೋರಲಾಗಿತ್ತು. ಸದರಿ ವ್ಯವಸ್ಥಾಪಕ ನಿರ್ದೇಶಕರು ಇವರು ಕೆಳಕಾಣಿಸಿದ ಅಧಿಕಾರಿಗಳಿಗೆ ಕಾರಣ ಕೇಳುವ ನೋಟಿಸನ್ನು ದಿನಾಂಕ: 22.6.2009 ರಂದು ನೀಡಿರುತ್ತಾರೆ.

(i) ಶ್ರೀ ಎಸ್.ಕೆ.ಪರಮೇಶ್, ಆಗಿನ ವ್ಯವಸ್ಥಾಪಕ ನಿರ್ದೇಶಕರು, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.
(ii) ಶ್ರೀ ಬಾಬುರಾವ್ ಹೆಚ್., ಪ್ರಧಾನ ವ್ಯವಸ್ಥಾಪಕರು, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.
(iii) ಶ್ರೀ ಎನ್.ಆರ್.ಜೋಶಿ, ಆಗಿನ ಕಾರ್ಯ ವ್ಯವಸ್ಥಾಪಕರು, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.
(iv) ಶ್ರೀ ಎನ್.ಎ. ಮುತ್ತು ಕೃಷ್ಣನ್ ಆಗಿನ ಪ್ರಭಾರ ಮುಖ್ಯ ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.

(v) ಶ್ರೀ ಬಿ. ವೆಂಕಟೇಶ್, ಆಗಿನ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.

(vi) ಶ್ರೀ ಮಹಮ್ಮದ್ ಖಾಲಿದ್, ಆಗಿನ ಪ್ರಭಾರ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.

ಸದರಿ ಅಧಿಕಾರಿಗಳು ಲಿಖಿತ ಸಮುಜಾಯಿಷಿಯನ್ನು ಸಲ್ಲಿಸಿದ್ದು. ಅವರುಗಳು ಸಲ್ಲಿಸಿದ್ದ ಸಮಜಾಯಿಷಿಯ ಸತ್ಯಾಸತ್ಯತೆಯನ್ನು ತಿಳಿಯಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇವರು ಒಂದು ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ವರದಿ ನೀಡಿರುತ್ತದೆ. ಸದರಿ ವರದಿಯನ್ನು ಸರ್ಕಾರವು ಪರಿಶೀಲಿಸಿ ಹೆಚ್ಚಿನ ಹಾಗೂ ವಿಶೇಷ ತನಿಖೆಯನ್ನು ನಡೆಸಿ ವರದಿ ನೀಡುವಂತೆ ಮಹಾಲೇಖಪಾಲರನ್ನು ಕೋರಲಾಗಿದೆ. ಮಹಾಲೇಖಪಾಲರ ವರದಿಯನ್ನು ನಿರೀಕ್ಷಿಸಲಾಗಿದೆ.

ಭಟ್ಕಳ ತಾಲ್ಲೂಕಿಗೆ ಖಾಸಗಿ ಬಸ್ಸುಗಳಿಗೆ ಕೊಟ್ಟ ಪರವಾನಗಿ ವಿವರ

406 (725) ಶ್ರೀ ಜೆ.ಡಿ.ನಾಯ್ಕ (ಭಟ್ಕಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಹಾಗೂ ಉಡುಪಿ ಜಿಲ್ಲೆಯ ಉಡುಪಿ ಹಾಗೂ ಕುಂದಾಪುರದಿಂದ ಯಾವ ಯಾವ ಕಂಪನಿಯ ಬಸ್ಸುಗಳಿಗೆ ಯಾವ ಯಾವ ವೇಳೆಯಲ್ಲಿ ಪರ್ಮಿಟ್ (ರಹದಾರಿ ಪತ್ರ) ನೀಡಲಾಗಿದೆ ಅಂತಹ ಬಸ್ಸುಗಳ ಹಾಗೂ ವೇಳೆಯ ವಿವರ ನೀಡುವುದು;

ಆ) ಸರ್ಕಾರದ ಅಧಿಕೃತ ಪರವಾನಗಿ ಹೊರತಾಗಿ ಅನಧಿಕೃತವಾಗಿ ದುರ್ಗಾಂಭ, ಎ.ಪಿ.ಎಂ. ದುರ್ಗಾ ಪ್ರಸಾದ, ಹೆಚ್.ಎಂ.ಟಿ. ಹಾಗೂ ಸರ್ವೇಶ್ವರ ಕಂಪನಿಯ ಹೆಸರಿನ ಬಸ್ಸುಗಳು ಭಟ್ಕಳಕ್ಕೆ ಅನಧಿಕೃತವಾಗಿ ಪ್ರಯಾಣಿಕರನ್ನು ಸಾಗಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯಾ;

ಇ) ಈ ಕಂಪನಿಯ ಹೆಸರಿನ ಬಸ್ಸುಗಳು ದಿನಾಗಲೂ ಅನಧಿಕೃತವಾಗಿ ಕಾರ್ಯಾಚರಣೆ ಮಾಡುತ್ತಿದ್ದರೂ ಸಾರಿಗೆ ಇಲಾಖೆ ಅಧಿಕಾರಿಗಳು ಈ ಬಸ್ಸುಗಳ ಮೇಲೆ ಕಾನೂನು ಕ್ರಮಕ್ಕೆಗೊಳ್ಳದೇ ಇರಲು ಕಾರಣಗಳು ಏನು;